**<u>ದಿನಾಂಕ 13.03.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಆರ್ ಕೆ ವಕೀಲರಿಂದಃ</u>**

ದಾವಾ ವ್ಯವಹಾರಕ್ಕೆ ಸಂಬಂದಪಟ್ಟಂತೆ 2 ಚೆಕ್ಕು ಪ್ರಕರಣಗಳನ್ನು ಹಾಕಿರುತ್ತೇನೆ. ಅವುಗಳ ನಂಬರ್ ನೆನಪಿಲ್ಲ. ಅವುಗಳ ಮೊತ್ತ ಹೇಳಲು ಆಗುವುದಿಲ್ಲ. ಈ ಕ್ರಿಮಿನಲ್ ಪ್ರಕರಣಗಳಲ್ಲಿ ಹಣ ಠೇವಣಿಗಾಗಿ ಅರ್ಜಿಯನ್ನು ಹಾಕಿರುತ್ತೇನೆ. ಈ ಅರ್ಜಿಗಳು ವಜಾ ಆದ ನಂತರ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಆದೇಶವನ್ನು ತಂದಿರುತ್ತೇನೆಂದರೆ ನಿಜ. ಶೇಕಡಾ 20 ರಷ್ಟು ಹಣವನ್ನು ಠೇವಣಿ ಇಡಲು ಎಸಿಜೆಎಂ ನ್ಯಾಯಾಲಯ ಬೆಂಗಳೂರು ಆದೇಶ ಮಾಡಿದ್ದಾರೆಂದರೆ ನಿಜ.ಈ ಪ್ರಕಾರ ಪ್ರತಿವಾದಿ ಠೇವಣಿ ಇಟ್ಟಿದ್ದಾರೆಂದರೆ ನಿಜ. ಈ ಠೇವಣಿ ಹಣವನ್ನು ಪಡೆಯಲು ಅರ್ಜಿ ಹಾಕಿರುತ್ತೇನೆಂದರೆ ನಿಜ. ಕ್ರಿಮಿನಲ್ ಪ್ರಕರಣಗಳ ಸಿಸಿ ಸಂಖ್ಯೆ 17059/2024 ಮತ್ತು 17071/2024 ಎಂದರೆ ನಿಜ. ಈ ಚೆಕ್ಕುಗಳನ್ನು ನಾನು ಬ್ಯಾಂಕಿಗೆ ಒಂದೇ ದಿನ ಹಾಕಿಲ್ಲ. ಈ ಚೆಕ್ಕುಗಳು ಒಂದೇ ದಿನ ಹಿಂಬರಹ ಮತ್ತು ಚೆಕ್ ಅಮಾನ್ಯವಾಗಿದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಅದರ ದಿನಾಂಕ 06.04.2024 ಎಂದರೆ ನಿಜ. ಸಾಕ್ಷಿಯು ಮುಂದುವರೆದು ನೆನಪಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವಾ ಸೇರಿಸಿ 3 ಪ್ರಕರಣಗಳಲ್ಲಿ 35,50,000/- ಬರಬೇಕು ಎಂದು ನುಡಿಯುತ್ತಾರೆ. ಈ ವ್ಯವಹಾರದಲ್ಲಿ ನಾನು ಬಡ್ಡಿ ಪಡೆದಿಲ್ಲ. 3 ಪ್ರಕರಣಗಳಲ್ಲಿ ಪ್ರತಿವಾದಿಗೆ ನೋಟೀಸ್ ಕೊಟ್ಟ ಬಗ್ಗೆ ನೆನಪಿಲ್ಲ. ಪ್ರಸ್ತುತ ದಾವಾ ಬಗ್ಗೆ ನೋಟೀಸ್ ನೀಡಿರುತ್ತೇನೆ. ಚೆಕ್ಕು ಪ್ರಕರಣಗಳ ಬಗ್ಗೆ ನೋಟೀಸ್ ಕೊಟ್ಟಿದ್ದು ಆದರೆ ದಿನಾಂಕ ನೆನಪಿಲ್ಲ.ಪ್ರಸ್ತುತ ದಾವಾ ನೋಟೀಸ್ ತಲುಪಿದೆ. ಪ್ರಕರಣಗಳ ನೋಟೀಸ್ ಬಗ್ಗೆ ನೆನಪಿಲ್ಲ.ಪ್ರತಿವಾದಿ ನನಗೆ ಪ್ರತ್ಯುತ್ತರ ನೀಡಿದ್ದಾರೆ. ಇದನ್ನು ನ್ಯಾಯಾಲಯಕ್ಕೆ ಕೊಟ್ಟ ಬಗ್ಗೆ ಗೊತ್ತಿಲ್ಲ.

ನಿಪಿ-1 ಕರಾರು ಪತ್ರವನ್ನು ಪ್ರತಿವಾದಿ ಮಾಡಿಕೊಂಡು ನಮ್ಮ ಮನೆಗೆ ಬಂದಿರುತ್ತಾರೆ. ಆಗ ಪ್ರತಿವಾದಿ ಜೊತೆಗೆ ನಮ್ಮ ಮನೆಗೆ ಯಾರು ಬಂದಿರಲಿಲ್ಲ. ನನ್ನ ಜೊತೆ ನನ್ನ ತಾಯಿ, ನನ್ನ ಮಕ್ಕಳು,ನನ್ನ ಮನೆಯವರು ಹಾಗೂ ಸ್ನೇಹಿತೆ

ಜಯಲಕ್ಷ್ಮಿ ಇದ್ದರು. ಬೇರೆ ಯಾರು ಇರಲಿಲ್ಲ. ನಿಪಿ-1 ರಲ್ಲಿ ಇನ್ನೊಬ್ಬರು ಸಾಕ್ಷಿ ನನ್ನ ತಾಯಿ ವಿಜಯಲಕ್ಷ್ಮಿ ಇದ್ದಾರೆ. ನನ್ನ ತಾಯಿಯನ್ನು ಸಾಕ್ಷಿ ಮಾಡಿಸಲು ಆಗುವುದಿಲ್ಲ ಕಾರಣ ಅವರಿಗೆ ನಡೆಯಲು ಆಗುವುದಿಲ್ಲ.

ಸಮಯಾವಕಾಶ ಕೋರಿದ್ದು ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**